**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಶೃಂಗೇರಿ**

**ಸಿ.ಸಿ. ನಂಃ 272/2018**

**ಫಿರ್ಯಾದುದಾರರು** : ಜಯಂತ ಹೆಚ್.ಎಂ, ಬಿನ್. ಮಂಜುನಾಥ ಎ.ಎಸ್.
31 ವರ್ಷ,ಕಂಟ್ರ್ಯಾಕ್ಟರ್ ಮತ್ತು ವ್ಯವಸಾಯ,
ವಾಸಃಹುಲುಗಾರುಕೊಡಿಗೆ, ಬಿದರಗೋಡು,
ಹೊಸಗದ್ದೆ ಪೋಸ್ಟ್ , ತೀರ್ಥಹಳ್ಳಿ ತಾಲ್ಲೂಕು,
ಶಿವಮೊಗ್ಗ.

**ಃವಿರುದ್ಧಃ**

**ಆರೋಪಿ** : ರೋಹಿತ್ ಬಿನ್. ರಾಮನಾಯ್ಕ,
35 ವರ್ಷ,ಪ್ರೋಪರ್ಯೆಟರ್ ಆಫ್ ಮಾರುತಿ
ಕನ್ಸಸ್ಟ್ರಕ್ಷನ್, ವಾಸಃ ಶ್ರೀಹರಿ ನಿಲಯ,
ಕೇಶವ ನಗರ, ಶಿರಾ ಟೌನ್ ಮತ್ತು ತಾಲ್ಲೂಕು,
ತುಮಕೂರು ಜಿಲ್ಲೆ.

*****

**ಆ ಪಾ ದ ನೆ**

ಆರೋಪಿಯಾದ ನಿಮ್ಮ ವಿರುದ್ಧ ಫಿರ್ಯಾದುದಾರರು ದಾಖಲು ಮಾಡಿರುವ ಫಿರ್ಯಾದು ಏನೆಂದರೆ, ನೀವು ಮತ್ತು ಫಿರ್ಯಾದುದಾರರು ಹಲವಾರು ವರ್ಷಗಳಿಂದ ಸ್ನೇಹಿತರಾಗಿದ್ದು, ನೀವು ಫಿರ್ಯಾದುದಾರರಿಂದ ನಿಮ್ಮ ತುರ್ತು ಅವಶ್ಯಕತೆಯ ಉದ್ದೇಶಕ್ಕಾಗಿ ರೂ.3,75,000/- ಗಳನ್ನು ದಿನಾಂಕಃ 18-05-2018 ರಂದು ಸಾಲವಾಗಿ ಪಡೆದಿದ್ದು, ಸದರಿ ಸಾಲದ ಹಣವನ್ನು ಬಡ್ಡಿಯೊಂದಿಗೆ ಮೂರು ತಿಂಗಳೊಳಗೆ ಮರುಪಾವತಿ ಮಾಡುವುದಾಗಿ ಒಪ್ಪಿ, ಅದೇ ದಿನ ನೀವು ಸದರಿ ಸಾಲದ ಹಣವನ್ನು ಬಡ್ಡಿಯೊಂದಿಗೆ ಮರುಪಾವತಿ ಮಾಡುವ ಖಾತರಿಗಾಗಿ ನಿಮ್ಮ ಉಳಿತಾಯ ಖಾತೆಯಿರುವ ಹೆಚ್ ಡಿ ಎಫ್ ಸಿ ಬ್ಯಾಂಕ್, ಯಲಹಂಕ ನ್ಯೂ ಟೌನ್ ಬೆಂಗಳೂರು ಶಾಖೆಗೆ ಸೇರಿದ ಚೆಕ್ ನಂಃ 000084 ನ್ನು ದಿನಾಂಕಃ20-08-2018 ಕ್ಕೆ ರೂ.4,00,000/- ಗಳನ್ನು ನಮೂದಿಸಿ ಚೆಕ್ಕನ್ನು ನೀಡಿ ನಗದೀಕರಿಸಿಕೊಳ್ಳುವಂತೆ ತಿಳಿಸಿದ್ದು, ಅದರಂತೆ ಫಿರ್ಯಾದುದಾರರು ಚೆಕ್ಕನ್ನು ದಿಃ 23/08/2018 ರಂದು ಜಮಾವಣೆಗಾಗಿ ಕರ್ನಾಟಕ ಬ್ಯಾಂಕ್, ಬೇಗಾರ್ ಶಾಖೆ, ಶೃಂಗೇರಿ ತಾಲ್ಲೂಕು ಮೂಲಕ ಹಾಜರುಪಡಿಸಿದಾಗ ಬ್ಯಾಂಕಿನವರು account closed ವೆಂಬ ಹಿಂಬರಹದೊಂದಿಗೆ ದಿನಾಂಕಃ30/08/2018 ರಂದು ಸದರಿ ಚೆಕ್ಕನ್ನು ವಾಪಸ್ಸು ಮಾಡಿದ್ದು ಹಾಗೂ ಈ ಬಗ್ಗೆ ನಿಮಗೆ ವಕೀಲರ ಮೂಲಕ ದಿನಾಂಕಃ 15/09/2018 ರಂದು ನೋಟೀಸನ್ನು ನೀಡಿದರೂ ಸಹ ನೀವು ಆರೋಪಿ ಸದರಿ ಚೆಕ್ಕಿನ ಹಣವನ್ನು

ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ನೀವು ಆರೋಪಿ ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಈ ರೀತಿ ಚೆಕ್ಕನ್ನು ನೀಡಿ ವರ್ಗಾವಣೆಯ ಲಿಖಿತ ಕಾಯ್ದೆ ಕಲಂ 138 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಪ್ರಶ್ನೆ. 1 ಃ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?
ಉತ್ತರ ಃ

ಪ್ರಶ್ನೆ.2 ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

ದಿನಾಂಕ ಃ 3 ನೇ ದಿವಸ ಜನವರಿ ಮಾಹೆ 2020.

(ಸೂರ್ಯನಾರಾಯಣ ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಶೃಂಗೇರಿ.